## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಾಮರಾಜನಗರ

**ಸಿ.ಸಿ. ನಂ.786/2026**

ಫಿರ್ಯಾದಿ : ರಾಜ್ಯದ ಪರವಾಗಿ ಅಬಕಾರಿ ಉಪ ವಲಯ,
ಚಾಮರಾಜನಗರ

**ವಿರುದ್ಧ**

ಆರೋಪಿ : ದರ್ಶನ್ ಆರ್ ಎಂ ಬಿನ್ ಮಹದೇವಸ್ವಾಮಿ
ವಯಸ್ಸು 23 ವರ್ಷ,
ವಾಸಃ ದುರ್ಗಿ ಬೀದಿ, ರಾಮಸಮುದ್ರ,
ಚಾಮರಾಜನಗರ ಟೌನ್.

## ಆರೋಪನೆ

**ಶ್ರೀ ಪ್ರಕಾಶ್ ಸಿ.ಡಿ., ಬಿ.ಎ., ಎಲ್.ಎಲ್.ಬಿ, ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ, ಚಾಮರಾಜನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,**

ದಿನಾಂಕಃ 16.03.2026ರಂದು ಮಾನ್ಯ ಅಬಕಾರಿ ಉಪ ಅಧೀಕ್ಷಕರು, ಚಾಮರಾಜನಗರ ಉಪ ವಿಭಾಗ ಚಾಮರಾಜನಗರ ರವರು ತಮ್ಮ ವಾಹನ ನೊಂದಣಿ ಸಂಃ ಕೆಎ-10-ಜಿ-0567ರಲ್ಲಿ ಸಿಬ್ಬಂದಿಗಳೊಡನೆ ಚಾಮರಾಜನಗರ ಟೌನ್ನನಲ್ಲಿ ಗಸ್ತು ನಡೆಸುತ್ತಿದ್ದಾಗ, ಚಾಮರಾಜನಗರ ಟೌನಿನ ರಾಮಸಮುದ್ರದ ಕುಲುವೆ ರಸ್ತೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಅಮಲು ತರಿಸುವ ಮಾದಕ ವಸ್ತುವಾದ ಗಾಂಜಾ ಸೇವನೆ ಮಾಡಿ ಅಪರಾಧ ಎಸಗಿದ್ದು, ಆ ಮೂಲಕ ಕಲಂ. 27(ಬಿ) ಎನ್.ಡಿ.ಪಿ.ಎಸ್ ಆ್ಯಕ್ಟ್ ರಡಿಯಲ್ಲಿ ಅಪರಾಧವಾನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

ಪ್ರಶ್ನೆಃ 1. ಓದಿ ಹೇಳಿದುದು ಅರ್ಥವಾಯಿತೇ?
ಉತ್ತರಃ  ಹೌದು

ಪ್ರಶ್ನೆಃ 2. ಶಿಕ್ಷೆಗೆ ಒಪ್ಪುತ್ತೀರೋ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ ತಪ್ಪಾಯಿತು

(ಮೇಲಿನ ದೋಷರೋಪಣೆಯನ್ನು ಆರೋಪಿಗೆ ಓದಿ ವಿವರಿಸಲಾಗಿ, ಆರೋಪಿ ಅರ್ಥಮಾಡಿಕೊಂಡು ನೀಡಲಾದ ಉತ್ತರವನ್ನು ನಾನು ನನ್ನ ಸ್ವ–ಹಸ್ತಾಕ್ಷರದಲ್ಲಿ ದಾಖಲು ಮಾಡಿಕೊಂಡಿರುತ್ತೇನೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 23.06.2026.

(ಪ್ರಕಾಶ್ ಸಿ.ಡಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ.,
ಚಾಮರಾಜನಗರ.

ಆರೋಪಿಯ ಸಹಿ